
# ದೇವರ ಕೊಡುವ ಸರ್ವಾಯುಧಗಳು



(ಸುಲಭ)






## ಸುಲಭ
## ವಿದ್ಯಾರ್ಥಿ ಪುಸ್ತಕ




# ಪಾಠ 1

## ಕಣ್ಣಿಗೆ ಕಾಣದ ಲೋಕ

ಸತ್ಯವೇದ ಕಥೆ:
ಯೇಸು ಕ್ರಿಸ್ತನು ಪರಲೋಕಕ್ಕೆ ಆರೋಹಣನಾದನು
(ಅಪೊ 1:1-11)



ಕಂಠಪಾಠ ವಚನ:
"ಕೊನೆಯದಾಗಿ, ಪ್ರಭುವಿನ ಅನ್ಯೋನ್ಯತೆಯಲ್ಲಿ ಬಲಾಢ್ಯರಾಗಿರಿ. ಅವರ ಪರಾಕ್ರಮ ಶಕ್ತಿಯನ್ನು ಆಶ್ರಯಿಸಿರಿ. ಸೈತಾನನು ನಿಮಗೆ ಒಡ್ಡುವ ಕುತಂತ್ರಗಳ ವಿರುದ್ಧ ಅಚಲರಾಗಿ ನಿಲ್ಲಲು ನೀವು ಸಮರ್ಥರಾಗುವಂತೆ ದೇವರು ನೀಡುವ ಸಕಲ ಶಸ್ತ್ರಾಸ್ತ್ರಗಳನ್ನು ಧರಿಸಿಕೊಳ್ಳಿರಿ."
ಎಫೆಸಿಯರಿಗೆ 6:10-11








☑ ""ನಾನು ಕಣ್ಣಿಗೆ ಕಾಣದಿರುವ ಲೋಕವನ್ನು ನಂಬುವ ತೀರ್ಮಾನ ತೆಗೆದುಕೊಳ್ಳುತ್ತೇನೆ ಮತ್ತು ದೇವರು ಕೊಡುವ ಸರ್ವಾಯುಧಗಳನ್ನು ಸಂಪೂರ್ಣವಾಗಿ ಧರಿಸಿಕೊಳ್ಳುತ್ತೇನೆ."

ಮೊದಲಕ್ಷರಗಳು: ☐





## ಬೂಟ್ ಕ್ಯಾಂಪ್

ದೇವದೂತನು ನಿಮಗೆ ಯಾವುದೋ ರೀತಿಯಲ್ಲಿ ಸಹಾಯ ಮಾಡುತ್ತಿರುವ ನಿಮ್ಮ ಚಿತ್ರವನ್ನು ಬಿಡಿಸಿರಿ. ನಿಮಗೆ ಎದುರಾಗುವ ಯಾವುದಾದರೂ ಅಪಾಯಕಾರಿ ಸ್ಥಳ ಮತ್ತು ಗಾಬರಿಪಡಿಸುವ ಪರಿಸ್ಥಿತಿಯ ಬಗ್ಗೆ ಯೋಚಿಸಿರಿ.




www.ChildrenAreImportant.com – Children's ministry resources, Sunday School, and Vacation Bible School (VBS) curriculum for churches and teachers.




# ಪಾಠ 2

## ಕತ್ತಲೆಯ ವಿರುದ್ಧ ಹೋರಾಡುವದು

ಸತ್ಯವೇದ ಕಥೆ:
ಸೆರೆಮನೆಯಲ್ಲಿ ಪೌಲ ಮತ್ತು ಸೀಲನು
(ಅಪೊ 16:16-31)



ಕಂಠಪಾಠ ವಚನ:
ನಮ್ಮ ಹೋರಾಟ ಕೇವಲ ನರಮಾನವರೊಂದಿಗಲ್ಲ, ದಿಗಂತದಲ್ಲಿರುವ ಅಧಿಕಾರಿಗಳ ಹಾಗೂ ಆಧಿಪತ್ಯಗಳ ವಿರುದ್ಧ; ಪ್ರಸ್ತುತ ಅಂಧಕಾರಲೋಕಾಧಿಪತಿಗಳ ಹಾಗೂ ಅಶರೀರ ದುಷ್ಟಗಣಗಳ ವಿರುದ್ಧ.
ಎಫೆಸಿಯರಿಗೆ 6:12




☑ "ನಾನು ವೈರಿಗೆ ವಿರುದ್ಧವಾಗಿ ಹೋರಾಡುತ್ತೇನೆಯೇ ಹೊರತು ನನ್ನ ಸುತ್ತಮುತ್ತಲಿನಲ್ಲಿರುವ ಜನರ ವಿರುದ್ಧವಲ್ಲ ಎಂಬ ಆಯ್ಕೆ ಮಾಡಿಕೊಂಡಿದ್ದೇನೆ"

ಮೊದಲಕ್ಷರಗಳು:



## ಬೂಟ್ ಕ್ಯಾಂಪ್

ನಿಮ್ಮ ಸುತ್ತಮುತ್ತಲಿನಲ್ಲಿರುವ ಜನರ ಕ್ರಿಯೆಗಳು ಮತ್ತು ಮಾತುಗಳ ವಿಷಯದಲ್ಲಿ ಎಚ್ಚರಿಕೆಯಾಗಿರ್ರಿ ಹಾಗೂ ಆತ್ಮೀಕ ಆಕ್ರಮಣಗಳನ್ನು ಅರಿತುಕೊಳ್ಳಿರಿ. ಒಬ್ಬರು ಇನ್ನೊಬ್ಬರ ಮೇಲೆ ಹಠ ಸಾಧಿಸುತ್ತಿರುವದನ್ನು ನೀವು ನೋಡುವಾಗ ಅಥವಾ ಅದರ ಬಗ್ಗೆ ಕೇಳಿದಾಗ, ಸೈತಾನನು ಎಷ್ಟು ಖುಷಿಪಡುತ್ತಾನೆ ಮತ್ತು ದೇವರು ಎಷ್ಟು ದುಃಖಪಡುತ್ತಾನೆ ಎಂಬದನ್ನು ಅರಿತುಕೊಳ್ಳಿರಿ. ಹೆಸರುಗಳನ್ನು ತೆಗೆದುಕೊಳ್ಳದೆ, ನಡೆದ ಸಂಗತಿಯನ್ನು ನಿಮ್ಮ ಶಿಕ್ಷಕಿಗೆ ಹೇಳಲು ಸಿದ್ಧತೆ ಮಾಡಿಕೊಳ್ಳಿರಿ




www.ChildrenAreImportant.com – Children's ministry resources, Sunday School, and Vacation Bible School (VBS) curriculum for churches and teachers.



# ಪಾಠ 3

## ಜಯಶಾಲಿಗಳಾಗಿ ನಿಲ್ಲಿರಿ

ಸತ್ಯವೇದ ಕಥೆ:
ಸ್ತೆಫೆನನ ಮರಣ
(ಅಪೊ 6:8-15, 7:51-60)




ಕಂಠಪಾಠ ವಚನ:
"ಎಂದೇ, ದೇವರು ಕೊಡುವ ಸಕಲ ಶಸ್ತ್ರಾಸ್ತ್ರಗಳೊಂದಿಗೆ ಸುಸಜ್ಜಿತರಾಗಿರಿ. ಆ ದುರ್ದಿನದಂದು ವೈರಿಗಳನ್ನು ಎದುರಿಸಲು ಆಗ ನೀವು ಶಕ್ತರಾಗುತ್ತೀರಿ. ಮಾತ್ರವಲ್ಲ, ಕಟ್ಟಕಡೆಯವರೆಗೆ ಹಿಮ್ಮೆಟ್ಟದೆ ನಿಲ್ಲುತ್ತೀರಿ"
ಎಫೆಸಿಯರಿಗೆ 6:13



☑ "“ನಾನು ದೃಢವಾಗಿ ನಿಲ್ಲುವ ಆಯ್ಕೆ ಮಾಡಿಕೊಂಡಿದ್ದೇನೆ.”

ಮೊದಲಕ್ಷರಗಳು: ☐





## ಬೂಟ್ ಕ್ಯಾಂಪ್

ಶಾಲೆಗೆ ಸತ್ಯವೇದವನ್ನು ತೆಗೆದುಕೊಂಡು ಬನ್ನಿರಿ ಮತ್ತು ಅದನ್ನು ನಿಮ್ಮ ಬ್ಯಾಗ್ ನೊಳಗೆ ಅಥವಾ ಬ್ಯಾಕ್ ಪ್ಯಾಕ್ ನೊಳಗೆ ಬಚ್ಚಿಡಬೇಡಿರಿ. ನೀವು ಏನನ್ನು ನಂಬುತ್ತೀರೋ ಆ ವಿಷಯದಲ್ಲಿ ಬಲವಾಗಿ ನಿಂತುಕೊಳ್ಳಿರಿ ಮತ್ತು ಕ್ರೈಸ್ತನಾಗಿ ಜೀವಿಸಲು ನಾಚಿಕೆಪಡಬೇಡಿರಿ




www.ChildrenAreImportant.com – Children's ministry resources, Sunday School, and Vacation Bible School (VBS) curriculum for churches and teachers.



# ಪಾಠ 4
## ಸತ್ಯವೆಂಬ ನಡುಕಟ್ಟು

ಸತ್ಯವೇದ ಕಥೆ:
ಅನನೀಯ ಮತ್ತು ಸಫ್ಫೈರಳು
(ಅಪೊ 5:1–10)



☑ "ನಾನು ಪ್ರಾಮಾಣಿಕತೆಯಿಂದ ಜೀವಿಸುವ ಆಯ್ಕೆ ಮಾಡಿಕೊಂಡಿದ್ದೇನೆ."

ಮೊದಲಕ್ಷರಗಳು:

ಕಂಠಪಾಠ ವಚನ:
"ಹಿಮ್ಮೆಟ್ಟದೆ ನಿಲ್ಲಲೇಬೇಕು. ಇದಕ್ಕಾಗಿ ಸತ್ಯವೆಂಬ ನಡುಕಟ್ಟನ್ನು ಕಟ್ಟಿಕೊಳ್ಳಿ. ನೀತಿಯೆಂಬ ರಕ್ಷಕವಚವನ್ನು ತೊಟ್ಟುಕೊಳ್ಳಿರಿ."
ಎಫೆಸಿಯರಿಗೆ 6:14a





## ಬೂಟ್ ಕ್ಯಾಂಪ್

ನೀವು ಹೇಳಿರುವ ಸುಳ್ಳಿನ ಬಗ್ಗೆ ಆಲೋಚಿಸಿರಿ ಮತ್ತು ಅದನ್ನು ಬರೆಯಿರಿ. ಅದು ಇತ್ತೀಚಿನದಲ್ಲದಿದ್ದರೂ ಪರವಾಗಿಲ್ಲ, ನೀವು ಚಿಕ್ಕವರಾಗಿದ್ದಾಗ ಹೇಳಿರಬಹುದು. ಈಗ ಮೊದಲನೆಯ ಸುಳ್ಳನ್ನು ಮುಚ್ಚಿಡಲು ಹೇಳಿದ ಎಲ್ಲಾ ಸುಳ್ಳುಗಳನ್ನು ಬರೆಯಿರಿ. ಅ ಸುಳ್ಳಿನ ನಿಮಿತ್ತ ಯಾರಿಗೆ ತೊಂದರೆಯಾಯಿತು ಎಂಬದನ್ನೂ ಬರೆಯಿರಿ.




www.ChildrenAreImportant.com – Children's ministry resources, Sunday School, and Vacation Bible School (VBS) curriculum for churches and teachers.



# ಪಾಠ 5

## ನೀತಿಯೆಂಬ ವಜ್ರಕವಚ

ಸತ್ಯವೇದ ಕಥೆ:
ಕೊರ್ನೇಲ್ಯನು
(ಅಪೊ 10:9-23)



ಕಂಠಪಾಠ ವಚನ:
“ಹಿಮ್ಮೆಟ್ಟದೆ ನಿಲ್ಲಲೇಬೇಕು. ಇದಕ್ಕಾಗಿ ಸತ್ಯವೆಂಬ ನಡುಕಟ್ಟನ್ನು ಕಟ್ಟಿಕೊಳ್ಳಿ. ನೀತಿಯೆಂಬ ರಕ್ಷಕವಚವನ್ನು ತೊಟ್ಟುಕೊಳ್ಳಿರಿ.”
ಎಫೆಸಿಯರಿಗೆ 6:14b

☑ "ನಾನು ಯಾವಾಗಲೂ ಸರಿಯಾದ ಕೆಲಸವನ್ನು ಮಾಡಲು ಆಯ್ಕೆ ಮಾಡುತ್ತೇನೆ."

ಮೊದಲಕ್ಷರಗಳು





### ಬೂಟ್ ಕ್ಯಾಂಪ್

ಉತ್ತಮ ಜೀವನ ಶೈಲಿ ಮತ್ತು ಇತರರೊಂದಿಗೆ ನಡೆದುಕೊಳ್ಳುವ ರೀತಿಯಿಂದ ಗೌರವಕ್ಕೆ ಪಾತ್ರರಾಗಿರುವಂಥ ಯಾರು ನಿಮಗೆ ಗೊತ್ತಿದ್ದಾರೆ? (ಇಂದಿನ ಸತ್ಯವೇದದ ಕಥೆಯಲ್ಲಿ ಬರುವ ಕೊರ್ನೇಲ್ಯನ ಹಾಗೆ) ಅವರ ಒಳ್ಳೆಯ ಜೀವನದ ಕುರಿತು ಒಂದು ವಾಕ್ಯದಲ್ಲಿ ಬರೆಯಿರಿ ಮತ್ತು ಹೋಗಿ ಅವರಿಗೆ ಅದರ ಬಗ್ಗೆ ಹೇಳಿರಿ.




www.ChildrenAreImportant.com – Children’s ministry resources, Sunday School, and Vacation Bible School (VBS) curriculum for churches and teachers.



# ಪಾಠ 6

## ಸಮಾಧಾನದ ವಿಷಯವಾದ ಸುವಾರ್ತೆ

ಸತ್ಯವೇದ ಕಥೆ:
ಫಿಲಿಪ್ಪನು ಮತ್ತು ಐಥಿಯೊಪ್ಯದವನು
(ಅಪೊ 8:26-40)



ಕಂಠಪಾಠ ವಚನ:
“ಶಾಂತಿಯ ಶುಭಸಂದೇಶವನ್ನು ಸಾರಲು ಶ್ರದ್ಧೆಯೆಂಬ ಪಾದರಕ್ಷೆಯನ್ನು ಮೆಟ್ಟುಕೊಳ್ಳಿರಿ.” ಎಫೆಸಿಯರಿಗೆ 6:15





☑ "ನಾನು ದೇವರೊಂದಿಗೆ ಒಳ್ಳೆಯ ಸಂಬಂಧವುಳ್ಳವನಾಗಿರುವ ಆಯ್ಕೆ ಮಾಡಿಕೊಂಡಿದ್ದೇನೆ ಮತ್ತು ಯಾವಾಗಲೂ ಆತನ ಸೇವೆ ಮಾಡಲು ಸಿದ್ಧನಾಗಿರುತ್ತೇನೆ."

ಮೊದಲಕ್ಷರಗಳು ☐



## ಬೂಟ್ ಕ್ಯಾಂಪ್

ಇತರರಿಗೆ ಸುವಾರ್ತೆ ಹೇಳಲು ಸಿದ್ಧರಾಗದೆ ಇರುವಾಗ ಹೇಗಿರುತ್ತದೆ ಎಂಬದನ್ನು ತಿಳಿದುಕೊಳ್ಳುವ ಸಮಯ ಬಂದಿದೆ. ಮೊದಲನೆಯದಾಗಿ, ನೀವು ಚಪ್ಪಲಿ ಅಥವಾ ಶೂ ಹಾಕಿಕೊಳ್ಳದೆ ರಸ್ತೆಯಲ್ಲಿ ಓಡುವದಾದರೆ ಹೇಗಿರುವದೆಂದು ಊಹಿಸಿಕೊಳ್ಳಿರಿ. ಅಯ್ಯೋ! ನಂತರ, ಕ್ರೈಸ್ತನಾಗುವದು ಹೇಗೆ ಎಂದು ನಿಮ್ಮನ್ನು ಕೇಳುವವರಿಗ ನೀವು ಏನು ಹೇಳುವಿರಿ ಎಂಬದನ್ನು ಬರೆಯಿರಿ.




www.ChildrenAreImportant.com – Children's ministry resources, Sunday School, and Vacation Bible School (VBS) curriculum for churches and teachers.




# ಪಾಠ 7

## ನಂಬಿಕೆಯೆಂಬ ಗುರಾಣಿ

ಸತ್ಯವೇದ ಕಥೆ:
ಪೌಲ ಮತ್ತು ಹಡಗು ಒಡೆದುಹೋದದ್ದು
(ಅಪೊ 27:21-37, 28:1)









☑ “ನಾನು ದೇವರಲ್ಲಿ ನಂಬಿಕೆಯಿಟ್ಟು, ಆತನಲ್ಲಿ ಭರವಸೆಯುಳ್ಳವನಾಗಿರುವ ಆಯ್ಕೆ ಮಾಡಿಕೊಂಡಿದ್ದೇನೆ.”

ಮೊದಲಕ್ಷರಗಳು

ಕಂಠಪಾಠ ವಚನ:
“ಸತತವೂ ವಿಶ್ವಾಸವೆಂಬ ಗುರಾಣಿಯನ್ನು ಹಿಡಿದುಕೊಳ್ಳಿರಿ. ಹೀಗೆ ಸೈತಾನನ ಅಗ್ನಿಬಾಣಗಳನ್ನೆಲ್ಲಾ ನಂದಿಸಲು ಶಕ್ತರಾಗುವಿರಿ.”
ಎಫೆಸಿಯರಿಗೆ 6:16





## ಬೂಟ್ ಕ್ಯಾಂಪ್

ಸತ್ಯವೇದದಲ್ಲಿ ಬರೆಯಲ್ಪಟ್ಟಿರವ ವಿಷಯಗಳು ನಿಮ್ಮ ಕಣ್ಣುಗಳಿಗೆ ಕಾಣಿಸದಿದ್ದರೂ, ನೀವು ಅವುಗಳನ್ನು ನಂಬುತ್ತಿರವದಾದರೆ ಅವುಗಳು ಯಾವುವು ಎಂಬದನ್ನು ಈ ವಾರ ಬರೆಯಿರಿ. ನೀವು ಬರೆದಿರುವ ವಿಷಯಗಳಲ್ಲಿ ವೈರಿಯು ಯಾವುದರಿಂದ ನಿಮ್ಮ ಮೇಲೆ ಹೆಚ್ಚು ಆಕ್ರಮಣ ಮಾಡಿದ್ದಾನೆ?




www.ChildrenAreImportant.com – Children’s ministry resources, Sunday School, and Vacation Bible School (VBS) curriculum for churches and teachers.



# ಪಾಠ 8

## ರಕ್ಷಣೆಯೆಂಬ ಶಿರಸ್ತ್ರಾಣ

ಸತ್ಯವೇದ ಕಥೆ:
ಸೌಲನ ಮಾನಸಾಂತರ
(ಅಪೊ 9:1-19)



ಕಂಠಪಾಠ ವಚನ:
"ರಕ್ಷಣೆಯೆಂಬ ಶಿರಸ್ತ್ರಾಣವನ್ನು ಧರಿಸಿಕೊಳ್ಳಿ; ಪವಿತ್ರಾತ್ಮರ ಕೊಡುಗೆಯಾದ ದೇವರ ವಾಕ್ಯವು ನಿಮಗೆ ಖಡ್ಗವಾಗಿರಲಿ."
ಎಫೆಸಿಯರಿಗೆ 6:17a

☑ "ನನ್ನ ರಕ್ಷಣೆಗಾಗಿ ನಾನು ಕರ್ತನಾದ ಯೇಸು ಕ್ರಿಸ್ತನಲ್ಲಿ ಭರವಸೆಯನ್ನಿಡುವ ಆಯ್ಕೆ ಮಾಡಿಕೊಂಡಿದ್ದೇನೆ."

ಮೊದಲಕ್ಷರಗಳು ☐





## ಬೂಟ್ ಕ್ಯಾಂಪ್

ನೀವು ರಕ್ಷಣೆಗಾಗಿ ಎಲ್ಲಿ ಮತ್ತು ಯಾವಾಗ ಪ್ರಾರ್ಥನೆ ಮಾಡಿದಿರೆಂಬದನ್ನು ನಿಮ್ಮ ಸತ್ಯವೇದದ ಮೊದಲನೆಯ ಪುಟದ ಮೇಲೆ ಬರೆಯಿರಿ. ಒಂದುವೇಳೆ ನಿಮಗೆ ನೆನಪಿಲ್ಲವೆಂದರೆ, ಈಗ ಅದನ್ನು ಮಾಡಬಹುದು! ವಿಶೇಷವಾದ ಸ್ಥಳಕ್ಕೆ ಹೋಗಿರಿ (ನಿಮ್ಮ ಮಲಗುವ ಕೋಣೆ, ಮನೆಯ ಹಿಂದೆ ಅಥವಾ ಸಭೆ) ಮತ್ತು ನಿಮ್ಮನ್ನು ಕ್ಷಮಿಸುವಂತೆ ದೇವರನ್ನು ಬೇಡಿಕೊಳ್ಳಿರಿ. ತನ್ನ ಪ್ರಾಣವನ್ನು ನಿಮ್ಮ ಪಾಪಗಳಿಗೆ ಕ್ರಯವಾಗಿ ಕೊಟ್ಟದ್ದಕ್ಕಾಗಿ ಯೇಸು ಕ್ರಿಸ್ತನಿಗೆ ಕೃತಜ್ಞತೆ ಸಲ್ಲಿಸಿರಿ ಮತ್ತು ಆತನಿಗೆ ನಿಮ್ಮ ಒಡೆಯನು ಹಾಗೂ ಯಜಮಾನನು ಆಗಿರುವಂತೆ ಬೇಡಿಕೊಳ್ಳಿರಿ. ನಾನು ನಿನಗಾಗಿ ಜೀವಿಸಲು ಬಯಸುತ್ತೇನೆ ಎಂದು ಆತನಿಗೆ ಹೇಳಿರಿ. ಸಮಯ ಮತ್ತು ಸ್ಥಳವನ್ನು ನಿಮ್ಮ ಸತ್ಯವೇದದ ಮೊದಲ ಪುಟ ಅಥವಾ ನಿಮ್ಮ ವಿದ್ಯಾರ್ಥಿ ಪುಸ್ತಕದಲ್ಲಿ ಬರೆಯಿರಿ.



www.ChildrenAreImportant.com – Children's ministry resources, Sunday School, and Vacation Bible School (VBS) curriculum for churches and teachers.



# ಪಾಠ 9


## ದೇವರ ವಾಕ್ಯವೆಂಬ ಕತ್ತಿ

ಸತ್ಯವೇದ ಕಥೆ:
ಪೇತ್ರನು ಜನಸಮೂಹದವರನ್ನುದ್ದೇಶಿಸಿ ಮಾತನಾಡಿದನು
(ಅಪೊ 2:12-17, 22-30, 34-41)



ಕಂಠಪಾಠ ವಚನ:
"ರಕ್ಷಣೆಯೆಂಬ ಶಿರಸ್ತ್ರಾಣವನ್ನು ಧರಿಸಿಕೊಳ್ಳಿ; ಪವಿತ್ರಾತ್ಮರ ಕೊಡುಗೆಯಾದ ದೇವರ ವಾಕ್ಯವು ನಿಮಗೆ ಖಡ್ಗವಾಗಿರಲಿ."
ಎಫೆಸಿಯರಿಗೆ 6:17b

ಮೊದಲಕ್ಷರಗಳು



☑ "ನಾನು ದೇವರ ವಾಕ್ಯವನ್ನು ಕಲಿತುಕೊಳ್ಳಲು ಮತ್ತು ನನ್ನ ಅನುದಿನದ ಜೀವಿತದಲ್ಲಿ ಉಪಯೋಗಿಸಿಕೊಳ್ಳುವ ಆಯ್ಕೆ ಮಾಡಿಕೊಂಡಿದ್ದೇನೆ."



## ಬೂಟ್ ಕ್ಯಾಂಪ್

ನೀವು ಸತತವಾಗಿ ಹೋರಾಡುತ್ತಿರುವ ರಣರಂಗದಲ್ಲಿ ನಿಮಗೆ ಅನ್ವಯಿಸುವ ಸತ್ಯವೇದ ವಾಕ್ಯವನ್ನು ಕಂಠಪಾಠ ಮಾಡಿರಿ ಮತ್ತು ಮುಂದಿನ ವಾರ ಅದನ್ನು ನಿಮ್ಮ ಟೀಚರ್ ಗೆ ಹೇಳಿರಿ. ನೀವು ನಿಮ್ಮ ತೋರಿಕೆ, ಆಸ್ತಿ, ಇನ್ನೂ ಹೆಚ್ಚು ಬೇಕು, ಆತ್ಮೀಕ ಭದ್ರತೆ ಅಥವಾ ಭವಿಷ್ಯದ ವಿಷಯದಲ್ಲಿ ಹೆದರಿಕೆಗಳನ್ನು ಅನುಭವಿಸುತ್ತಿದ್ದೀರೋ.




www.ChildrenAreImportant.com – Children's ministry resources, Sunday School, and Vacation Bible School (VBS) curriculum for churches and teachers.



# ಪಾಠ 10

## ಎಡಬಿಡದೆ ಪ್ರರ್ಥನೆ ಮಾಡುವದು


ಸತ್ಯವೇದ ಕಥೆ:
ಪೇತ್ರನು ಸೆರೆಮನೆಯಿಂದ ಬಿಡುಗಡೆಯಾದನು
(ಅಪೊ 12:1-19)





☑ “ನಾನು ಆತ್ಮೀಕ ಹೋರಾಟದಲ್ಲಿದ್ದೇನೆಂದು ತಿಳಿದು ಯಾವಾಗಲೂ ಪ್ರಾರ್ಥನೆ ಮಾಡುವ ಆಯ್ಕೆ ಮಾಡಿಕೊಂಡಿದ್ದೇನೆ.”

ಮೊದಲಕ್ಷರಗಳು



ಕಂಠಪಾಠ ವಚನ:
“ಪವಿತ್ರಾತ್ಮರಿಂದ ಪ್ರೇರಿತರಾಗಿ ಎಲ್ಲಾ ಸಮಯಗಳಲ್ಲೂ ಪ್ರಾರ್ಥಿಸಿರಿ. ನಿಮ್ಮ ಕೋರಿಕೆ, ಬೇಡಿಕೆಗಳನ್ನು ದೇವರಿಗೆ ಅರ್ಪಿಸಿರಿ. ಎಚ್ಚರವಾಗಿದ್ದು ಎಲ್ಲಾ ದೇವಜನರಿಗಾಗಿ ಎಡೆಬಿಡದೆ ಪ್ರಾರ್ಥಿಸಿರಿ.”
ಎಫೆಸಿಯರಿಗೆ 6:18





## ಬೂಟ್ ಕ್ಯಾಂಪ್

ನಾವು ನಮ್ಮ ಅಭ್ಯಾಸಗಳನ್ನು ಸತತವಾಗಿ 21 ದಿನ ತಪ್ಪದೆ ಮಾಡಿದರೆ, ಅವುಗಳನ್ನು ಹಾಗೆಯೇ ಮುಂದುವರೆಯುತ್ತವೆ. ನೀವು ಪ್ರತಿದಿನ ಮುಂಜಾನೆ ಹಾಸಿಗೆಯಿಂದ ಏಳುವಾಗ ಪ್ರಾರ್ಥನೆ ಮಾಡಿರಿ. ಸ್ವಲ್ಪ ಹೊತ್ತು ಮಾಡಿದರು ಪರವಾಗಿಲ್ಲ, ಆದರೆ ಒಂದುದಿನವೂ ತಪ್ಪಿಸಬಾರದು. ಒಂದುವೇಳೆ ಒಂದುದಿನವೇನಾದರು ತಪ್ಪಿಸಿದರೆ ಮಾರಣೆಯ ದಿನ ಎರಡೂ ದಿನದ ಪ್ರಾರ್ಥನೆ ಮಾಡಿರಿ. ನಿಮ್ಮ ಹಾಸಿಗೆಯನ್ನೇ ಪ್ರಾರ್ಥನೆಯ ಸ್ಥಳವನ್ನಾಗಿ ಬದಲಾಯಿಸಿಕೊಳ್ಳಿರಿ. 21 ದಿನ ಸತತವಾಗಿ ಪ್ರಾರ್ಥನೆ ಮಾಡುವ ಮೂಲಕ ನಿಮಗೆ ನೀವೇ ಬಹುಮಾನ ಪಡೆದುಕೊಳ್ಳಿರಿ.



www.ChildrenAreImportant.com – Children’s ministry resources, Sunday School, and Vacation Bible School (VBS) curriculum for churches and teachers.




Easy Armor of God
Kannada

10811

www.ChildrenAreImportant.com
info@childrenareimportant.com
We are located in Mexico.

ಮಕ್ಕಳೇ ಪ್ರಮುಖರು